# ಅನ್ನದಾತನ ಅಳಲು

ಇತ್ತೀಚಿನ ವರ್ಷಗಳಲ್ಲಿ ಸಮೂಹ ಸನ್ನಿಯಂತೆ ಹರಡಿಕೊಳ್ಳುತ್ತಿರುವ ರೈತರ ಆತ್ಮಹತ್ಯೆಯ ಪ್ರಸಂಗಗಳು ಭಾರತದ, ಅದರಲ್ಲೂ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವನ್ನೇ ದಾಖಲಿಸುತ್ತಿವೆ. ಆತ್ಮಹತ್ಯೆಯೆಂಬುದು ವ್ಯಕ್ತಿಯ ಜೀವನದಲ್ಲಿನ ಹತಾಶೆಯ ಪರ್ಯಾಪ್ತಸ್ಥಿತಿಯ ಸ್ಫೋಟ. ನಮ್ಮ ರೈತರು ಬದುಕಿನ ಭರವಸೆಗಳನ್ನೆಲ್ಲ ಕಳೆದುಕೊಂಡು, ಇಂಥ ಘಟ್ಟವನ್ನು ತಲುಪುತ್ತಿರುವುದರ ಹಿನ್ನೆಲೆಯನ್ನು ಕುರಿತು ಗಂಭೀರವಾದ ಚಿಂತನೆ ನಡೆಯಬೇಕಾದುದು ಅನಿವಾರ್ಯ. ನೇಗಿಲಯೋಗಿ ಅನ್ನದಾತ ದೇಶದ ಬೆನ್ನೆಲುಬು– ಇಂಥ ಅಲಂಕಾರ ಮಾತುಗಳಿಂದ ರೈತನನ್ನು ಸ್ತುತಿಸುವುದರ ಬದಲು, ಸಕ್ರಿಯವಾಗಿ ಸಕಾಲದಲ್ಲಿ ಅವನಿಗೆ ನೆರವು ನೀಡಬೇಕಾದ ತುರ್ತು ಇಂದಿನದು. ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಸರ್ಕಾರದ ಪಾತ್ರ ಮಹತ್ವವಾಗಿರುವುದು ನಿಜ. ಆದರೆ ಸಾರ್ವಜನಿಕರೂ ಇದರಲ್ಲಿ ಸರ್ಕಾರದೊಂದಿಗೆ ಕೈಜೋಡಿಸಬೇಕಾದ ಅಗತ್ಯವೂ ಇದೆ. ನಾಡಿನ ಪ್ರಜ್ಞಾವಂತರೂ ಉದ್ಯೋಗಪತಿಗಳೂ ಆರ್ಥಿಕ ತಜ್ಞರೂ ಮನೋವಿಜ್ಞಾನಿಗಳೂ ಸಮಾಜ ಶಾಸ್ತ್ರಜ್ಞರೂ ಎಲ್ಲರೂ ಜೊತೆಗೂಡಿ ರೈತರನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಇಷ್ಟೊಂದು ಪ್ರಮಾಣದಲ್ಲಿ ರೈತರ ಆತ್ಮಹತ್ಯೆಯ ಪ್ರಕರಣಗಳು ಪುನರಾವರ್ತನೆಯಾಗುತ್ತಿದ್ದರೂ, ಆ ಕುರಿತು ಒಂದು ವ್ಯವಸ್ಥಿತವೂ, ಪ್ರಾಮಾಣಿಕವೂ ಆಗಿರುವ ಅಧ್ಯಯನ ನಡೆದಿಲ್ಲ. ನಮ್ಮ ರೈತರ ಸಮಸ್ಯೆಗಳನ್ನು ಆರ್ಥಿಕ ಕೌಟುಂಬಿಕ ಸಾಮಾಜಿಕ ರಾಜಕೀಯ– ಇಂಥ ಹಲವಾರು ನೆಲೆಗಳಿಂದ ಪರಿಶೀಲಿಸಬೇಕಾದುದು ಸೂಕ್ತವಾದೀತು, ಸರ್ಕಾರದ ನೀತಿಯಲ್ಲಾಗುವ ಬದಲಾವಣೆಗಳು, ಹವಾಮಾನದ ವೈಪರೀತ್ಯ ಆರ್ಥಿಕ ಅಡಚಣೆ ಕೃಷಿಕಾರ್ಮಿಕರ ಕೊರತೆ ಸಕಾಲದಲ್ಲಿ ಕೀಟನಾಶಕ ಬಿತ್ತನೆಯ ಬೀಜ ಮುಂತಾದವು ದೊರೆಯದಿರುವಿಕೆ, ಕೌಟುಂಬಿಕ ಸಾಮರಸ್ಯದ ಅಭಾವ ರೈತನ ವೈಯಕ್ತಿಕ ದೌರ್ಬಲ್ಯಗಳು– ಇಂಥವೆಲ್ಲವೂ ರೈತರನ್ನು ಕಂಗೆಡಿಸುವ ಭೂತಗಳು. ಸಾಲದ ಹಣದ ಆಮಿಷಕ್ಕೆ ಒಳಗಾಗಿ, ಮಿತಿಮೀರಿ ಮಾಡಿದ ಸಾಲವನ್ನು ತೀರಿಸಲಾಗದೇ ರೈತರು ಆತ್ಮಹತ್ಯೆಗೆ ಶರಣು ಹೋಗುತ್ತಿರುವುದು ಈ ದಿನಗಳಲ್ಲಿ ಸಾಮಾನ್ಯ ಸಂಗತಿಯಾಗಿದೆ.

ರೈತರ ಸಮಸ್ಯೆಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಅವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಂಘಟಿತವೂ ವ್ಯವಸ್ಥಿತವೂ ಆಗಿರುವ ಪ್ರಯತ್ನ ಅತ್ಯಂತ ಅಗತ್ಯ. ಆ ಪ್ರಯತ್ನ ಕೇವಲ ದಾಖಲಾತಿಯ ಮಟ್ಟಗಟ್ಟೇ ಆಗಿ ಉಳಿಯದೇ, ಕ್ರಿಯೆಯನ್ನು ಪ್ರಚೋದಿಸುವಂತಿರಬೇಕು. ತಾಲ್ಲೂಕು ಮಟ್ಟದಲ್ಲಿ ರೈತರ ಬದುಕನ್ನು ಕುರಿತು ಸಮಗ್ರ ಸಮೀಕ್ಷೆ ನಡೆಸಿ, ಅಲ್ಲಿ ಲಭ್ಯವಾದ ಮಾಹಿತಿಗಳನ್ನು ಕೃಷಿ ತಜ್ಞರೂ ಶಾಸಕರೂ ಸಂಬಂಧಿಸಿದ ಅಧಿಕಾರಿಗಳೂ ಮನೋ ವಿಜ್ಞಾನಿಗಳೂ ಆರ್ಥಿಕ ತಜ್ಞರೂ ಸಾಮಾಜಿಕ ಕಾರ್ಯಕರ್ತರೂ ಒಟ್ಟಾಗಿ ಕುಳಿತು ವಿಶ್ಲೇಷಿಸಿ, ಕಾರ್ಯಸಾಧುವಾದ ಪರಿಹಾರಗಳನ್ನು ಕಂಡುಹಿಡಿಯಬೇಕು. ಅಂಥ ಪರಿಹಾರಗಳನ್ನು ಸಕಾಲದಲ್ಲಿ ರೈತರಿಗೆ ಒದಗಿಸುವ ಕೆಲಸವೂ ಬಹಳ ಮುಖ್ಯವಾದುದು. ಅವಕಾಶವಿದ್ದಲ್ಲಿ ರೈತರ ಕ್ಷೇಮವೇ ಉದ್ದೇಶವಾಗಿರುವಂಥ ಒಂದು ಜಾಗೃತದಳವನ್ನು ಏರ್ಪಡಿಸಿಕೊಂಡು, ಸಂಕಷ್ಟದಲ್ಲಿರುವ ಕೃಷಿಕನ ನೆರವಿಗೆ ಧಾವಿಸಬೇಕು. ರೈತರ ಕ್ಷೇಮನಿಧಿಯೊಂದನ್ನು ಹುಟ್ಟುಹಾಕಿ, ಹಣಕಾಸಿನ ತೊಂದರೆಗೆ ಒಳಗಾಗಿರುವ ರೈತ ಕುಟುಂಬಗಳಿಗೆ ತಾತ್ಕಾಲಿಕವಾಗಿ ಸಹಾಯ ಮಾಡಬಹುದು. ಕೃಷಿಕರ ಕಲ್ಯಾಣಕ್ಕಾಗಿ ದುಡಿಯುವ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು ರೈತರನ್ನು ಮುಖತಃ ಭೇಟಿಮಾಡಿ, ಅವರ ಸಮಸ್ಯೆಗಳಿಗೆ ಕಿವಿಗೊಟ್ಟು, ಅವರ ಮಾನಸಿಕ ಸ್ಥೈರ್ಯ ಕುಸಿಯದಂತೆ ನೋಡಿಕೊಳ್ಳಬೇಕಾದುದೂ ಬಹಳ ಮುಖ್ಯವಾದ ಕೆಲಸ. ಕ್ರಿಮಿ ಕೀಟಗಳ ಹಾವಳಿಯಿಂದಲೋ, ಹವಾಮಾನದ ವೈಪರೀತ್ಯದಿಂದಲೋ ಒಂದು ಬೆಳೆಗೆ ಹಾನಿಯಾದರೆ, ಪರ್ಯಾಯ ಬೆಳೆಯಿಂದ ಆ ನಷ್ಟವನ್ನು ತುಂಬಿಕೊಳ್ಳುವ ದಾರಿಯನ್ನು ಕೃಷಿ ತಜ್ಞರು ರೈತರಿಗೆ ತೋರಿಸಬೇಕು. ಸರ್ಕಾರ ರೈತನಿಗೆ ನೀಡುವ ಆರ್ಥಿಕ ಸವಲತ್ತುಗಳು ಸಕಾಲದಲ್ಲಿ ರೈತನಿಗೆ ತಲುಪಿ, ಅವುಗಳ ಸದುಪಯೋಗವಾಗಬೇಕು. ಎಲ್ಲಕ್ಕೂ ಮಿಗಿಲಾಗಿ ರೈತರ ಹಿತಕ್ಕಾಗಿ ಅರ್ಪಣಾ ಮನೋಭಾವದಿಂದ ದುಡಿಯುವ ನಾಯಕರು ಹೆಚ್ಚ ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಂಡಲ್ಲಿ ಮಾತ್ರ 'ಜೈಕಿಸಾನ್' ಎಂಬ ಘೋಷಣೆಗೆ ಪ್ರಾಯೋಗಿಕತೆ ಪ್ರಾಪ್ತವಾದೀತು.

■ ವೈನತೇಯ

---

# ಮಾತೇ ಮುತ್ತು

★ ಕನ್ನಡ ನಾಡಿನ ಹಿತಾಸಕ್ತಿಯ ವಿಚಾರ ಬಂದಾಗ ನ್ಯಾವ್ಯಾರೂ ಜಾತಿ– ಮತಗಳ ಮುಖ ನೋಡುತ್ತ, ಏನೇನೋ ಕ್ಷುಲ್ಲಕ ಲೆಕ್ಕ ಹಾಕುತ್ತ ಕೂಡಬಾರದು. ಅವೆಲ್ಲವನ್ನೂ ಮರೆತು ನಾವು ಕರ್ನಾಟಕದ ಹಿತಕ್ಕಾಗಿ ಮುನ್ನುಗ್ಗಬೇಕು.

–ಬಸವರಾಜ ಕಟ್ಟೀಮನಿ

★ ನನ್ನ ಓದುಗರಿಗೆ ಒಂದು ಬಾರಿ ಒಂದೇ ಬಾರಿ ಸಾತ್ವಿಕ ಹೃದಯ ಸಮಾಲೋಚನೆ ಬಂದರೆ ಸಾಕು, ನಾನು ಧನ್ಯ. ನಕ್ಕು ಕಣ್ಣು ಮಾತ್ರ ತೇವವಾದರೆ ಸಾಲದು, ಅತ್ತು ಹೃದಯ ಹದವಾಗಬೇಕು.

–ಬೀಚಿ

★ ಜೀವನಾ ಅನ್ನೋದು ನಾಟಕ ಆಗಬೇಕು; ನಾಟಕ ಅನ್ನೋದು ಜೀವನ ಆಗಬೇಕು.

–ದ.ರಾ.ಬೇಂದ್ರೆ

★ ಮರಣವು ಇಲ್ಲವಾಗಿದ್ದರೆ ಸ್ಮರಣವೂ ಇಲ್ಲ. ಮೃತ್ಯು ಮತ್ತು ಅದೃಷ್ಟ ಇವೆರಡೂ ಮನುಷ್ಯ ಜೀವನದ ಕೊನೆಯ ಅಧ್ಯಾಯಗಳು. ಇವುಗಳ ಮುಂದೆ ಯಾರದೂ ಏನೂ ಸಾಗದು; ಆದುದರಿಂದಲೇ ಮನುಷ್ಯನಿಗೆ ಈಶ್ವರನ ನೆನಪಾಗುತ್ತದೆ.

–ಕಾ.ಕಾ.ಕಾಲೇಲಕರ

★ ಹಣ ಮತ್ತು ದುರಾಸೆಯನ್ನು ಬೆನ್ನುಹತ್ತಿ ಹೊರಟರೆ, ವೈಯಕ್ತಿಕ ಬದುಕಿನಲ್ಲೂ ನೆಮ್ಮದಿ ಕಾಣಲು ಅಸಾಧ್ಯ.

–ಗೌತಮ ಬುದ್ಧ

★ ಒಳ್ಳೆಯ ಕೆಲಸ ಮಾಡಿ ಮರೆತು ಬಿಟ್ಟರೆ ಒಳ್ಳೆಯದು. ಯಾಕೆಂದರೆ ನಮ್ಮ ಒಳ್ಳೆಯ ಕಾರ್ಯ ನೆನಪಿಟ್ಟುಕೊಂಡರೆ ಜನರು ನಮ್ಮನ್ನು ಕೊಂಡಾಡಲಿ ಎಂಬ ಇಚ್ಛೆ ಉಂಟಾಗಬಹುದು. ಕೊಂಡಾಡಿದರೆ ಸಂತೋಷವಾಗುತ್ತದೆ, ಇಲ್ಲದಿದ್ದರೆ ದುಃಖವಾಗುತ್ತದೆ.

–ಸಿದ್ದೇಶ್ವರ ಸ್ವಾಮೀಜಿ

★ ಎಲ್ಲರನ್ನು ಕೆಳಗೆಳೆಯುವ ಮೂಲಕ ಸಮಾನತೆ ಸಾಧಿಸುವುದಲ್ಲ; ಎಲ್ಲರನ್ನು ಮೇಲಕ್ಕೆ ಕರೆದೊಯ್ಯುವ ಮೂಲಕ ಸಮಾನತೆ ಸಾಧಿಸಬೇಕು.

–ಸ್ವಾಮಿ ವಿವೇಕಾನಂದ

★ ಮಹಾತ್ಮರು ಆಪತ್ತು ದೂರದಲ್ಲಿರುವಾಗ ಭಯ ಪಡುತ್ತಾರೆ. ಹತ್ತಿರ ಬಂದಾಗ ಧೈರ್ಯದಿಂದ ಎದುರಿಸುತ್ತಾರೆ, ತಾಳ್ಮೆಯಿಂದಿರುತ್ತಾರೆ.

–ಹಿತೋಪದೇಶ

★ ದಂಪತಿಯಲ್ಲಿ ಯಾರು ಯಾರಿಗೆ ಋಣಿ? ಅವಳಿಗವನೋ? ಇವನಿಗವಳೋ?

–ಕೆ.ಎಸ್.ನಿಸಾರ್ ಅಹ್ಮದ್

★ ಯಾರು ದಾನವನ್ನು ಕೊಟ್ಟ ಮೇಲೆ ಪಶ್ಚಾತ್ತಾಪ ಪಡುವುದಿಲ್ಲವೋ, ಇತರರ ದುಃಖ ನೋಡಿ ಸಂತೋಷಿಸುವುದಿಲ್ಲವೋ, ವಿವಿಧ ಧರ್ಮಗಳನ್ನು ತಿಳಿಯಲು ಅಕ್ಕರೆ ಉಳ್ಳವನೋ ಅವನು ಮಹಾತ್ಮನು.

–ಮಹಾಭಾರತ

★ ವಿಪತ್ತಿನಲ್ಲಿ ಧೈರ್ಯವೂ, ಅಭ್ಯುದಯದಲ್ಲಿ ಕ್ಷಮೆಯೂ, ಸಭೆಯಲ್ಲಿ ವಾಕ್ಪಟುತ್ವವೂ, ಯುದ್ಧದಲ್ಲಿ ಶೌರ್ಯವೂ, ಶಾಸ್ತ್ರದಲ್ಲಿ ಆಸಕ್ತಿಯೂ ಮಹಾತ್ಮರ ಪ್ರಕೃತಿ ಸಿದ್ಧವಾದ ಗುಣಗಳು.

–ಭರ್ತೃಹರಿ

★ 'ಅಸಾಧ್ಯ' ಎನ್ನುವವರು ಸಾವಿರ ಮಂದಿ. ಮಾಡ ಹೋದರೆ 'ಸೋಲು ಸಿದ್ಧ' ಎನ್ನುವವರು ಮತ್ತೆ ಸಾವಿರ ಮಂದಿ. ಆದರೂ ನೀನು ಮಾಡುತ್ತ ಹೋಗು... ಮಾಡುತ್ತಲೇ ಹೋಗು. ಅಸಾಧ್ಯ ಎನ್ನುವುದು ಸಾಧ್ಯ ಆಗಿಯೇ ಆಗುತ್ತದೆ.

–ಎಡ್ಗರ್ ಎ. ಗೆಸ್ಟ್